**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಲೂರು.**

**ಸಿ.ಸಿ.858/2016**

ಆರೋಪಿಯ ಹೆಸರು ಃ ನಾರಾಯಣ್ ಬಿ.ಜಿ,
ಮನೆ ನಂ.301, ಬಿ.ಸಿ.ಸಿ.ಲೇಔಟ್,
8ನೇ ಕ್ರಾಸ್, 1ನೇ ಹಂತ, ವಿಜಯ ನಗರ,
ಬೆಂಗಳೂರು 560 040.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿಯ ಹೇಳಿಕೆ**

ಪ್ರಶ್ನೆ 1ಃ ನೀವು ಸಾಕ್ಷಿದಾರರ ವಿಚಾರಣೆಯನ್ನು ಕೇಳಿದ್ದೀರಾ?

ಉತ್ತರ ಃ

ಪ್ರಶ್ನೆ 2ಃ ಪ್ರಾಸಾ-1 ವಿಜಯದಾಸ್‌ರವರು ತನ್ನ ಸಾಕ್ಷ್ಯದಲ್ಲಿ ಆರೋಪಿಯು ತನ್ನ ದರ್ದು ನಿಮಿತ್ತ 2,00,000-00 ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು ಮರುಪಾವತಿಸುವ ಸಲುವಾಗಿ ಅದೇ ದಿನ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾ, ಚಂದ್ರಲೇಔಟ್ ಶಾಖೆಯ ಚೆಕ್ ನಂ.730935ನ್ನು ದಿನಾಂಕಃ25.8.2016 ಎಂದು ನಮೂದಿಸಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ 3ಃ ಪ್ರಾಸಾ-1ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ, ಸದರಿ ಚೆಕ್‌ನಲ್ಲಿ ನಮೂದಿಸಿದ ಹಣವನ್ನು ನಗಧೀಕರಿಸಿಕೊಳ್ಳುವ ಸಲುವಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಆಲೂರು ಶಾಖೆಯ ಮುಖಾಂತರ ಸಲ್ಲಿಸಿದಾಗ ಈ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚಕ್

ಅಮಾನ್ಯಗೊಂಡಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ 4ಃ ಪ್ರಾಸಾ-1ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ, ದಿಃ14.9.2016ರಂದು ತನ್ನ ವಕೀಲರ ಮೂಲಕ ಆರೋಪಿಗೆ ನೋಟೀಸ್ ನೀಡಿದ್ದು, ಸದರಿ ನೋಟೀಸು ಸ್ವೀಕರಿಸಿದ್ದರೂ ಸಹ ಆರೋಪಿಯು ಮೋಸ ಮಾಡುವ ಉದ್ದೇಶದಿಂದ ಹಣ ಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ 5 ಃ ನೀವು ಹೇಳುವುದು ಏನಾದರೂ ಇದೆಯಾ?

ಉತ್ತರಃ

ಪ್ರಶ್ನೆ 6 ಃ ನಿಮ್ಮ ಪರವಾಗಿ ಸಾಕ್ಷಿಯ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ

(ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.